ಸಿ. ಸಿ. ನಂ.- **286/24**

ಸಿ.ಡಬ್ಲ್ಯೂ- 11 / ಪಿ.ಡಬ್ಲ್ಯೂ- 7

1 ನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ. ದ. ನ್ಯಾ. ದಂ.ಗಳ ನ್ಯಾಯಾಲಯ, ಹೊಸಪೇಟೆ.

ಸಾಕ್ಷಿಯನ್ನು ದಿನಾಂಕ 08-12-2025 ರಂದು ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿ ಹೆಸರು - | ವಿರುಪಾಕ್ಷ |
| ತಂದೆಯ ಹೆಸರು - | ಸೋಮಪ್ಪ |
| ವಯಸ್ಸು - | 25 ವರ್ಷಗಳು |
| ಉದ್ಯೋಗ - | ಜೆ ಎಸ್ ಡಬ್ಲ್ಯೂ ನಲ್ಲಿ ನೌಕರ |
| ವಾಸಸ್ಥಳ - | ಕೊಂಡನಾಯಕನಹಳ್ಳಿ, ಹೊಸಪೇಟೆ |

ಮುಖ್ಯ ವಿಚಾರಣೆ- ಮಾನ್ಯ ಎ. ಪಿ. ಪಿ. ಅವರಿಂದ-

ಚಾಸಾ.10 ಮತ್ತು 12 ರವರ ಪರಿಚಯ ನನಗೆ ಇಲ್ಲ. ಮೃತ ಅಶ್ವಿನಕುಮಾರರವರ ಪರಿಚಯ ನನಗೆ ಇಲ್ಲ. ಸುಮಾರು ಒಂದು ವರ್ಷದ ಹಿಂದೆ ಶ್ರೀಕರಿ ಶಾಲೆಯ ಹತ್ತಿರ ರಾತ್ರಿ 8.30 ಗಂಟೆಗೆ ಗಾಡಿಯಿಂದ ಮೃತ ಅಶ್ವಿನಕುಮಾರರವರು ಬಿದ್ದಿದ್ದನ್ನು ನಾನು ನೋಡಿದೆ, ಅಲ್ಲಿ ಟ್ರಾಫಿಕ್ ಪೊಲೀಸರು ಇದ್ದರು, ಮೃತನ ಮೃತದೇಹವನ್ನು ಯಾರು ಇನ್ನು ಮುಟ್ಟಿಲ್ಲ, ಅದನ್ನು ಆಸ್ಪತ್ರೆಗೆ ತೆಗೆದುಕೊಂಡು ಹೋಗಲು ಹೇಳಿದರು, ಅದರಂತೆ ನಾನು ಆಟೋದಲ್ಲಿ ಮೃತದೇಹವನ್ನು ಹಾಕಿಕೊಂಡು ಹೊಸಪೇಟೆಯ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದೆ. ಅಲ್ಲಿಂದ ಠಾಣೆಗೆ ಹೋದೆ. ಮೃತ ವ್ಯಕ್ತಿ ಅಲ್ಲಿ ಯಾವ ಕಾರಣಕ್ಕೆ ಹಾಗೂ ಹೇಗೆ ಬಿದ್ದಿದ್ದರು ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ. ನಾನು ಅಪಘಾತವನ್ನು ಪ್ರತ್ಯಕ್ಷವಾಗಿ ನೋಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಮಾನ್ಯ ಎ.ಪಿ.ಪಿ. ಅವರು ಅನುಮತಿ ಕೇಳಿದ್ದು, ಪ್ರಕರಣದ ವಾಸ್ತವಾಂಶ, ಅಭಿಯೋಜನೆಯ ದಾಖಲೆಗಳು ಹಾಗೂ ಸಾಕ್ಷಿಯ ಹೇಳಿಕೆಯನ್ನು ಪರೀಶಿಲಿಸಿ ಸಕಾರಣ ಕಂಡು ಬಂದಿದ್ದರಿಂದ ಅನುಮತಿಯನ್ನು ನೀಡಲಾಯಿತು.)

ಪಾಟೀ ಸವಾಲು- ಮಾನ್ಯ ಎ. ಪಿ. ಪಿ. ಅವರಿಂದ-

ದಿನಾಂಕ 27.12.2023 ರಂದು ಶ್ರೀಕರಿ ಕಾಲೇಜು ಕ್ರಾಸ್ ಹತ್ತಿರ ನಾನು, ಚಾಸಾ.10 ಮತ್ತು 12 ರವರು ಬರುತ್ತಿರುವಾಗ ಕೊಂಡನಾಯಕನ ಹಳ್ಳಿ ಕಡೆಯಿಂದ ಒಂದು ಮೋಟಾರ್ ಸೈಕಲ್ ನಲ್ಲಿ ಒಬ್ಬ ಅಯ್ಯಪ್ಪ ಸ್ವಾಮಿ ತನ್ನ ಹಿಂದುಗಡೆ ಒಬ್ಬ ವ್ಯಕ್ತಿಯನ್ನು ಕೂರಿಸಿಕೊಂಡು ಶ್ರೀಕರಿ ಕಾಲೇಜು ಕಡೆಗೆ

ಹೋಗುತ್ತಿರುವಾಗ ಹೊಸಪೇಟೆ ಕಡೆಯಿಂದ ಬಂದ ಒಂದು ಮೊ.ಸೈ ಚಾಲಕ ತನ್ನ ಮೋ.ಸೈ ನಲ್ಲಿ ಒಬ್ಬ ವ್ಯಕ್ತಿಯನ್ನು ಕೂರಿಸಿಕೊಂಡು ಆ ವಾಹನವನ್ನು ಅತಿವೇಗ ಮತ್ತು ಅಜಾಗರೂಕತೆ ಯಿಂದ ಚಾಲನೆ ಮಾಡಿಕೊಂಡು ಬಂದು, ಹೀಗೆ ಬರುತ್ತಿದ್ದ ಇನ್ನೊಂದು ಮೋ.ಸೈ. ಗೆ ಡಿಕ್ಕಿ ಮಾಡಿ ಅಪಘಾತ ಪಡಿಸಿದ್ದರು ಎಂದರೆ ಸಾಕ್ಷಿ ನಾನು ಪ್ರತ್ಯಕ್ಷವಾಗಿ ನೋಡಿಲ್ಲ, ಆದರೆ ಕೇಳಿ ಪಟ್ಟೆ ಹೀಗೆ ಕೊಂಡನಾಯಕನಹಳ್ಳಿ ಕಡೆಯಿಂದ ಬಂದ ಮೋ.ಸೈ ಸಂ.ಕೆಎ-35-ಇಬಿ-8689 ಆಗಿದ್ದು ಅದರ ಚಾಲಕ ಮೃತ ವ್ಯಕ್ತಿ ಎಂದರೆ ನನಗೆ ಗೊತ್ತಿಲ್ಲ. ಇನ್ನೊಂದು ಮೋ.ಸೈ ಸಂ.ಎಂ ಹೆಚ್-45-ಎಕೆ-2574 ಆಗಿದ್ದು, ಅದರ ಚಾಲಕ ಆರೋಪಿ ಆಗಿದ್ದು, ಅವರ ಹಿಂದೆ ಚಾಸಾ.9 ರವರು ಕೂತಿದ್ದರು ಎಂದು ನನಗೆ ಗೊತ್ತಿಲ್ಲ. ಸದರಿ ಅಪಘಾತ ಆರೋಪಿಯ ತಪ್ಪಿನಿಂದ ಆಗಿರುತ್ತದೆ ಎಂದು ನಾನು ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಅಲ್ಲಗೆಳೆದ ಹೇಳಿಕೆಯನ್ನು ನಿಪಿ-9 ಎಂದು ಗುರುತಿಸಲಾಯಿತು.

ಆರೋಪಿತರ ಪರ ವಕೀಲರು ಪಾಟೀಸವಾಲು ಇಲ್ಲವೆಂದು ಹೇಳಿರುತ್ತಾರೆ.

ಮರು ವಿಚಾರಣೆ- ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಸಹಿ-

1 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ.ಗಳು, ವಿಜಯನಗರ ಜಿಲ್ಲೆ, ಹೊಸಪೇಟೆ.